ಶ್ರೀ ಸಿದ್ದರಾಮಯ್ಯ (ಮಾನ್ಯ ಶಿಕ್ಷಣ ಸಚಿವರ ಪರವಾಗಿ).—ಅಧ್ಯಕ್ಷರೇ, ಕಳೆದ ೪-೫ ವರ್ಷಗಳಿಂದ ಉಪನ್ಯಾಸಕರು ಹಾಗೂ ಉಪಾಧ್ಯಾಯರುಗಳು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದು ಅವರು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಿ ಅವರನ್ನು ಖಾಯಂ ಮಾಡುವ ಬಗ್ಗೆ ಶಿಕ್ಷಣ ಇಲಾಖೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿ ಆ ಸಮಿತಿಯ ವರದಿಯನ್ನು ಕೋರಲಾಗಿದೆ. ಸಮಿತಿಯ ವರದಿ ಸಲ್ಲಿಸಿದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ. ಮತ್ತು ಅವರಿಗೆ ಬೇಸಿಗೆ ರಜೆಯ ವೇತನವನ್ನು ನೀಡಲು ಈಗಾಗಲೇ ಆದೇಶ ನೀಡಲಾಗಿದೆ. ಆದೇಶದ ಸಂಖ್ಯೆ ಇಡಿ/೨೮೩/೮೭ ದಿನಾಂಕ ೧೩-೭-೧೯೮೮.

12 ದಕ್ಷಿಣ ಕನ್ನಡ ಜಿಲ್ಲಾಪರಿಷತ್ತಿನವರಿಂ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಂ ಸರ್ಕಾರದ ಮಂಜೂರಾತಿಗೆ ಒತ್ತಾಯ

ಶ್ರೀ ಪಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ೧೯೮೫-೮೬ನೇ ಸಾಲಿನಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦ ಕೋಟಿ ರೂಪಾಯಿಯನ್ನು ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಪಡೆದು ಮೂರು ವರ್ಷಗಳಲ್ಲಿ ರಸ್ತೆ ಸೇತುವೆ ಕಟ್ಟಡ ಇನ್ನಿತರ ಕಾಮಗಾರಿಗಳ ಬಗ್ಗೆ ಒಂದು ಯೋಜನೆ ತಯಾರಿಸಿ ಅದಕ್ಕೆ ಸರ್ಕಾರದ ಮಂಜೂರಾತಿಯನ್ನು ಕೋರಿತ್ತು. ಈ ದಿಸೆಯಲ್ಲಿ ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಉಭಯ ಸದನಗಳಲ್ಲಿ ಪರಿಣಾಮಕಾರಿಯಾಗಿ ಚರ್ಚಿಸಿದರೂ ಈ ತನಕ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಈ ವಿಚಾರವನ್ನು ಸರಕಾರ ಕೂಡಲೇ ಪರಿಶೀಲಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಕಾರ್ಯಕ್ರಮಗಳು ನಡೆಸಲು ಹಣವ ಕೊರತೆ ಇದುದ್ದರಿಂದ ಸರ್ಕಾರಕ್ಕೆ ಕೂಡಲೇ ಬೇಕಾದ ಹಣವನ್ನು ಮಂಜೂರಾತಿ ಮಾಡಲಿಂ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ ನಾನು ಈ ಹೇಳಿಕೆ ನೀಡುತ್ತೇನೆ).—ಮಾನ್ಯ ಅಧ್ಯಕ್ಷರೆ ಜಿಲ್ಲಾ ಪರಿಷತ್ ಕಾಯ್ದೆಯ ಕಲಂ ೧೯೬ರ ಪ್ರಕಾರ ಜಿಲ್ಲಾ ಪರಿಷತ್ತುಗಳು ಸರ್ಕಾರದ ಪೂರ್ವಾನುಮತಿ ಪಡೆಯಬೇಕೆಂದಂ ಮತ್ತು ಸರ್ಕಾರ ವಿಧಿಸಿದ ಪರತ್ತುಗಳಿಗೆ ಒಳಪಟ್ಟು ಬ್ಯಾಂಕ್‌ಗಳಿಂದ ಯಾವುದೇ ಕಾಮಗಾರಿಗೆ ಬೇಕಾದ ಹಣವನ್ನು ಸಾಲದ ಮೂಲಕ ಪಡೆಯುವುದಕ್ಕೆ ಅವಕಾಶ ಇದೆ. ಇಂತಹ ಹಣವನ್ನು ಮರುಪಾವತಿ ಮಾಡಲು ಋಣ ಪರಿಹಾರ ನಿಧಿಯನ್ನು ಸೃಷ್ಟಿಸಬೇಕಾಗುತ್ತದೆ. ಈ ನಿರ್ಬಂಧದ ಮೂಲಕ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಜಿಲ್ಲಾ ಪರಿಷತ್ ದಕ್ಷಿಣ ಕನ್ನಡ ಇವರಿಗೆ ಸರ್ಕಾರ ಅನುಮತಿ ನೀಡಿದೆ. ಈ ದಿಸೆಯಲ್ಲಿ ಶಾಸನದಲ್ಲಿ ಲಭ್ಯವಿರುವ ಅವಕಾಶಗಳಿಗೆ ಅನುಗುಣವಾಗಿ ಈ ರೀತಿ ಪಡೆದ ಸಾಲದ ಮರುಪಾವತಿಗೆ ಋಣ ಪರಿಹಾರ ನಿಧಿಯನ್ನು ಸೃಷ್ಟಿಸಲು ಸಹ ಸರ್ಕಾರ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗೆ ಆದೇಶ ನೀಡಿದೆ.

ಸುಳ್ಯ ತಾಲ್ಲೂಕಿನ ಬೆಳ್ಳಾರೆ ಸರ್ಕಾರಿ ಕಿರಿಯ ಮಹಾ ವಿದ್ಯಾಲಯಕ್ಕೆ ಬಿ.ಪಿ.ಎಡ್. ತರಬೇತಿಂದಾರರ ಹುದ್ದೆಯನ್ನು ನೀಡಂವುದು

ಶ್ರೀ ಕೆ. ಕಂಶಾಲ.— ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಸರ್ಕಾರಿ ಕಿರಿಯ ಮಹಾವಿದ್ಯಾಲಯಂ ಬೆಳ್ಳಾರೆ ಸರ್ಕಾರಿ ಕಿರಿಯ ಮಹಾವಿದ್ಯಾಲಯಂ ಸುಳ್ಯ ಈ ಕಾಲೇಜುಗಳಿಂ ೧೯೫೨ನೇ ಇಸವಿಯಲ್ಲಿ ಪ್ರಾರಂಭವಾಗಿದ್ದು ಇಲ್ಲಿ ಸೇವೆ ಸಲ್ಲಿಸುತ್ತಿರುವ ಶಾರೀರಿಕ ಶಿಕ್ಷಕರ ಬಿ.ಪಿ.ಎಡ್. ಹುದ್ದೆ ಈಗ ಇರುವುದು ೧೯೫೨ರ ನಂತರ ಹೊಸದಾಗಿ ಪ್ರಾರಂಭಗೊಂಡ ರಾಜ್ಯದ ಎಲ್ಲಾ ಪ್ರೌಢ ಶಾಲೆಗಳಲ್ಲಿ ಬಿ ಪಿ ಎಡ್ ತರಬೇತಿ ಹೊಂದಿದವರ ಮಂಜೂರಾತಿ ಹುದ್ದೆ ಇರುವುದು. ಈ ಪ್ರೌಢಶಾಲೆಗಳಂತೆ ೧೯೫೨ರಲ್ಲಿ ಪ್ರಾರಂಭಗೊಂಡ ಹಳೆಯ ಈ ಎರಡು ಕಿರಿಯ ಮಹಾ ವಿದ್ಯಾಲಯಗಳಲ್ಲಿಯೂ ಹುದ್ದೆಗಳನ್ನು ಬಿ ಪಿ ಎಡ್ ತರಬೇತಿದಾರ ಹುದ್ದೆಯನ್ನು ನೀಡುವಂತೆ ಕ್ರಮ ಕೈಗೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.